**ಕೋರ್ಸ್ ಮುಗಿಸಿದ ಬಳಿಕ ಅಗ್ರಸ್ಥಾನದಲ್ಲಿರುವ ಕಂಪನಿಗಳನ್ನು ಗುರುತಿಸಿ, ಅವು ಕಾರ್ಯಾಚರಣೆ ನಡೆಸುವ ಮುಖ್ಯ ಕಚೇರಿ, ಶಾಖೆಗಳು, ಅವಕಾಶಗಳನ್ನು ಪರಿಗಣಿಸಿ, ನಿಮ್ಮ ಆದ್ಯತೆಗಳಂತೆ ಕಂಪನಿಗಳೊಡನೆ ಸಂಪರ್ಕಿಸಬೇಕು.**

# ಪ್ರತಿಭೆಯಿಂದ ಪ್ರತಿಫಲ

**ವಿ. ಪ್ರದೀಪ್ ಕುಮಾರ್**



ಎಂಬಿಎ, ಬಿಇ, ಇತ್ಯಾದಿ ಕೋರ್ಸ್‌ಗಳಲ್ಲಿ ಸಮ್ಮರ್ ಪ್ರಾಜೆಕ್ಟ್‌ಗಳು ಒಂದು ಮುಖ್ಯ ಹಂತ. ಕಂಪನಿಯ ಭವಿಷ್ಯವನ್ನು ರೂಪಿಸುವ ನಿರ್ಧಾರಗಳನ್ನು ತೆಗೆದುಕೊಳ್ಳಲು, ಅಧಿಕಾರಿಗಳಿಗೆ ನಿಖರವಾದ ಮತ್ತು ವಿಶ್ವಾಸಾರ್ಹವಾದ ಮಾಹಿತಿಯನ್ನು ಒದಗಿಸುವುದೇ ಪ್ರಾಜೆಕ್ಟ್‌ಗಳ ಮೂಲ ಉದ್ದೇಶವಾಗಿರಬೇಕು.

## ಪ್ರಾಜೆಕ್ಟ್ ಆಯ್ಕೆ ಹೇಗೆ?

ನಿಮ್ಮ ಪ್ರತಿಭೆಗೆ ಸಂಬಂಧಿಸಿದಂತೆ ಸೂಕ್ತವಾದ ಉದ್ಯಮ ಯಾವುದು? ಎಂಜಿನಿಯರಿಂಗ್‌ನಲ್ಲಿ ಎಲೆಕ್ಟ್ರಾನಿಕ್ಸ್, ಟೆಲಿಕಮ್ಯೂನಿಕೇಷನ್, ಮೆಕಾನಿಕಲ್ ಇತ್ಯಾದಿಗಳಂತೆ, ಹಲವಾರು ಸ್ಪೆಶಲೈಜೇಷನ್‌ಗಳಿವೆ.

ಉದಾಹರಣೆಗೆ, ಎಂಜಿನಿಯರಿಂಗ್ ವೃತ್ತಿಯಲ್ಲಿರುವ ವರ್ಗೀಕರಣವನ್ನು ಗುರುತಿಸಿ, ಅಲ್ಲಿರುವ ಅವಕಾಶಗಳನ್ನೂ, ಸವಾಲುಗಳನ್ನೂ ಗಮನಿಸಿ, ಯಾವುದು ಸೂಕ್ತವೆಂದು ನಿರ್ಧರಿಸಬೇಕು. ಉದಾಹರಣೆಗೆ, ನೀವು ಟೆಲಿಕಮ್ಯೂನಿಕೇಷನ್ ಮಾಡುತ್ತಿದ್ದಲ್ಲಿ ಹಲವಾರು ದೂರವಾಣಿ ಮತ್ತು ಮೊಬೈಲ್ ಕಂಪನಿಗಳು, ಸರ್ವೀಸ್ ಕಂಪನಿಗಳು, ಇಂಟರ್ನೆಟ್ ಕಂಪನಿಗಳು ಮೊದಲಾದ ಉದ್ಯಮಗಳನ್ನು ಗಮನಿಸಬೇಕು. ಟೆಲಿಕಮ್ಯೂನಿಕೇಷನ್‌ಗೆ ಸಂಬಂಧಿಸಿದಂತೆ, ಅಗ್ರಸ್ಥಾನದಲ್ಲಿರುವ ಕಂಪನಿಗಳನ್ನು ಗುರುತಿಸಿ, ಅವು ಕಾರ್ಯಾಚರಣೆ ನಡೆಸುವ ಮುಖ್ಯ ಕಚೇರಿ, ಶಾಖೆಗಳು, ಅವಕಾಶಗಳನ್ನು ಪರಿಗಣಿಸಿ, ನಿಮಗೆ ಯಾವುದು ಸೂಕ್ತವೆಂದು ನಿರ್ಧರಿಸಬೇಕು. ಪ್ರಾಧ್ಯಾಪಕರು ಮತ್ತು ಪ್ಲೇಸ್‌ಮೆಂಟ್ ಅಧಿಕಾರಿಗಳೊಡನೆ ಸಮಾಲೋಚಿಸಬೇಕು. ನಿಮ್ಮ ಆದ್ಯತೆಗಳಂತೆ ಕಂಪನಿಗಳೊಡನೆ ಸಂಪರ್ಕಿಸಬೇಕು.

## ಭವಿಷ್ಯ ರೂಪಿಸಿ

- **ಅಧ್ಯಯನ:** ಪ್ರಾಜೆಕ್ಟ್ ಮಾಡಲು ಆಶಿಸುವ ಕಂಪನಿಯ ಬಗ್ಗೆ ಮಾಹಿತಿಯನ್ನು ಷೇರು ಮಾರುಕಟ್ಟೆ, ಇಂಟರ್ನೆಟ್, ಪತ್ರಿಕೆಗಳು, ಉದ್ಯಮದ ಜಾಲತಾಣಗಳಿಂದ ಸಂಗ್ರಹಿಸಿ.
- **ಪರಿಕಲ್ಪನೆ:** ಕಂಪನಿಗೆ ಉಪಯುಕ್ತವಾದ ವಿಷಯದಲ್ಲಿ ಅಲ್ಪಾವಧಿ ಮತ್ತು ದೀರ್ಘಾವಧಿ ಸಮಸ್ಯೆಗಳನ್ನು ಅರ್ಥೈಸಿಕೊಂಡು ಪ್ರಾಜೆಕ್ಟ್ ಮಾಡಬೇಕು. ಸಾಧಾರಣವಾಗಿ ಪ್ರಸ್ತುತವಾಗಿರುವ ವಿಷಯಗಳೆಂದರೆ: ಉತ್ಪನ್ನ ಮತ್ತು ತಂತ್ರಜ್ಞಾನ, ಗ್ರಾಹಕರ ಆಸಕ್ತಿ ಮತ್ತು ಅಭಿರುಚಿ, ಗ್ರಾಹಕರ ಅಪೇಕ್ಷೆ ಮತ್ತು ನಿರೀಕ್ಷೆ, ಗ್ರಾಹಕರ ಸೇವೆಯ ಅಳತೆಗೋಲುಗಳು ಇತ್ಯಾದಿ.
- **ಪ್ರಸ್ತಾವನೆ:** ಪ್ರಸ್ತುತ ಮತ್ತು ಪ್ರಚಲಿತ ವಿಷಯಗಳನ್ನು ಆರಿಸಿ, ಅಚ್ಚುಕಟ್ಟಾದ ಪ್ರಸ್ತಾವನೆಯನ್ನು ಕಂಪನಿಗಳಿಗೆ ಕಳಿಸಿದರೆ ಆಡಳಿತ ವರ್ಗದವರು ಗಂಭೀರವಾಗಿ ಪರಿಗಣಿಸಿ ಪ್ರಾಜೆಕ್ಟ್ ಮಾಡಲು ಅನುಮೋದನೆ ನೀಡುವುದು ಖಂಡಿತ.
- **ವಿನ್ಯಾಸ:** ಪ್ರಾಜೆಕ್ಟಿನ ವಿನ್ಯಾಸದಲ್ಲಿ ಉದ್ಯಮದ ಸಮಸ್ಯೆ ಬಗ್ಗೆ ಮಾಹಿತಿ, ನಿಯಂತ್ರಿಸಲಾಗುವ ಮತ್ತು ನಿಯಂತ್ರಿಸಲಾಗದ ಅಂಶಗಳ ಅಧ್ಯಯನ, ಪರ್ಯಾಯ ಯೋಜನೆಗಳು, ನಿರ್ಣಯ ಪ್ರಕ್ರಿಯೆಯ ಮೌಲ್ಯಮಾಪನ, ಇತ್ಯಾದಿಗಳ ವ್ಯಾಖ್ಯಾನವಿರಬೇಕು.

**ಪ್ರಾಜೆಕ್ಟ್ ಸ್ಪೆಷಲ್**

ಅನುಸರಿಸುವ ವಿಧಾನಗಳು, ಸಮೀಕ್ಷೆಗಳು, ಮಾಹಿತಿ ಸಂಗ್ರಹಣೆ, ಇತ್ಯಾದಿ ಕಾರ್ಯಗಳಲ್ಲಿ ಗುಣಮಟ್ಟವನ್ನು ಕಾಪಾಡುವ ಪ್ರಾಮಾಣಿಕ ಪ್ರಯತ್ನವಿರಲಿ. ಇಂತಹ ವೃತ್ತಿಪರ ಧೋರಣೆಯಿಂದ ಕಂಪನಿಯವರಲ್ಲಿ ವಿಶ್ವಾಸವನ್ನು ಮೂಡಿಸಬಹುದು.

- **ಮಾಹಿತಿ ಸಂಗ್ರಹಣೆ:** ಪ್ರಾಜೆಕ್ಟ್ ಪ್ರಕ್ರಿಯೆಯಲ್ಲಿ ಪ್ರಶ್ನಾವಳಿಯಿಂದ ಸಂಗ್ರಹವಾಗುವ ಮಾಹಿತಿ ಮುಖ್ಯ. ಎಲ್ಲ ವಾದಗಳಿಗೂ, ವಿಶ್ಲೇಷಣೆಗೂ ಇದೇ ಆಧಾರ. ನಿಖರವಾದ ಮತ್ತು ವಿಶ್ವಾಸಾರ್ಹ ಮಾಹಿತಿಯನ್ನೊದಗಿಸುವ ಪ್ರಾಥಮಿಕ ಸಮೀಕ್ಷೆಗಳು ಉಪಯುಕ್ತ. ಪ್ರಾಜೆಕ್ಟ್ ಮುಕ್ತಾಯದ ಹಂತವನ್ನು ಸಮೀಪಿಸುತ್ತಿದ್ದಂತೆ, ವಿಶ್ಲೇಷಣೆ ಮಾಡಲು, ಸಾಕಷ್ಟು ಮಾಹಿತಿ, ಆಧಾರಾಂಶಗಳಿವೆಯೇ ಎಂದು ಗಮನಿಸಬೇಕು.
- **ವಿಶ್ಲೇಷಣೆ ಮತ್ತು ವರದಿ:** ಕಂಪನಿಯ ಇತಿಮಿತಿಗಳನ್ನು ಗಮನಿಸಿ, ಯಾವುದೇ ರೀತಿಯ ಪಕ್ಷಪಾತವಿಲ್ಲದೆ, ವಿಶ್ಲೇಷಣೆ ಅರ್ಥಗರ್ಭಿತವಾಗಿರಲಿ. ಆಡಳಿತದ ಸುಧಾರಣೆಗೆ, ಸಮಸ್ಯೆಗಳ ಪರಿಹಾರಕ್ಕೆ, ವಿಶ್ಲೇಷಣೆ ನಿರ್ಣಾಯಕವಾಗಿದ್ದು, ನೀವು ನೀಡುವ ಸಲಹೆ, ಶಿಫಾರಸುಗಳು ಕಾರ್ಯಗತ ಮಾಡುವಂತಿರಬೇಕು.
- **ವರದಿಯ ನಿರೂಪಣೆ:** ಸಮಗ್ರವಾದ ವರದಿಯನ್ನು ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಪರಿಣಾಮಕಾರಿಯಾಗಿ ಮಂಡಿಸಬೇಕು.

ಶಿಫಾರಸುಗಳನ್ನು ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಅವರ ಸಂದೇಹಗಳನ್ನು ಊಹಿಸಿ, ಅದರ ನಿವಾರಣೆ ಕುರಿತು ಸಲಹೆಗಳಿರಲಿ. ಈ ರೀತಿ, ಪ್ರಾಜೆಕ್ಟನ್ನು ವೃತ್ತಿಪರ ಧೋರಣೆಯಿಂದ ಪೂರ್ಣಗೊಳಿಸಿದರೆ, ಮುಂದೆ ನಿಮ್ಮ ನೇಮಕದ ಬಗ್ಗೆ ಅನುಕೂಲಕರ ಅಭಿಪ್ರಾಯ ಕಂಪನಿಯಲ್ಲಿ ಮೂಡುತ್ತದೆ.

- **ಸಂಶೋಧನೆಗಳಿಂದಲೇ ಉದ್ಯಮದ ಭವಿಷ್ಯದ ರಚನೆ:** ಸಮಸ್ಯೆಗಳನ್ನು ಗುರುತಿಸಲು ಅಥವಾ ಪರಿಹರಿಸಲು, ಸಂಶೋಧನೆ ಅಥವಾ ಪ್ರಾಜೆಕ್ಟ್‌ಗಳನ್ನು ನಿಯೋಜಿಸಲು ಕಂಪನಿಯವರು ಕಾತುರರಾಗಿರುತ್ತಾರೆ. ಇಂತಹ ಪ್ರಾಜೆಕ್ಟ್ ಗಳನ್ನು ಪ್ರತಿಭಾವಂತ ವಿದ್ಯಾರ್ಥಿಗಳ ಮುಖಾಂತರ ಮಾಡಿದರೆ, ಗುಣಮಟ್ಟದ ಜತೆಗೆ ಖರ್ಚುವೆಚ್ಚಗಳೂ ಮಿತಿಯಲ್ಲಿರುತ್ತದೆ.

ನೀವು ಮಾಡುವ ಪ್ರಾಜೆಕ್ಟ್‌ನ ಉದ್ದೇಶ ಪರಿಶೋಧಾತ್ಮಕ ಅಥವಾ ಗುಣಾತ್ಮಕವಾಗಿರಲಿ; ನಿರ್ವಹಣೆಯಲ್ಲಿ ಉದ್ಯೋಗಶೀಲತೆಯಿದ್ದು, ವಿಷಯ ಕಂಪನಿಯ ಅಭಿವೃದ್ಧಿಗೆ ಪೂರಕವಾಗಿರಲಿ. ನಿಮ್ಮ ವರದಿಯಲ್ಲಿನ ಸಲಹೆ ಮತ್ತು ಶಿಫಾರಸುಗಳು ನಿರ್ಣಯ ಪ್ರಕ್ರಿಯೆಯಲ್ಲಿ ಸಹಾಯಕವಾದರೆ, ಈ ಆಧಾರದಿಂದಲೇ, ನಿರ್ವಾಹಕರು ಉದ್ಯಮದ ಭವಿಷ್ಯದ ಕಾರ್ಯತಂತ್ರವನ್ನು ರೂಪಿಸುತ್ತಾರೆ.

ವೃತ್ತಿ ಜೀವನದ ಮೊಟ್ಟಮೊದಲ ಪರಿಚಯವನ್ನು ನೀಡುವ ಈ ಅವಕಾಶಗಳು, ಕಲಿತ ಸಿದ್ಧಾಂತಗಳನ್ನು ವ್ಯಾವಹಾರಿಕವಾಗಿ ಬಳಸುವ ಕೌಶಲವನ್ನೂ ಬೆಳೆಸುತ್ತದೆ. ಆದರೆ, ಈ ಅವಕಾಶಗಳನ್ನು ಗಂಭೀರವಾಗಿ ಪರಿಗಣಿಸಿ, ಬುದ್ಧಿವಂತಿಕೆಯಿಂದ ಬಳಸಿದರೆ, ವೃತ್ತಿಜೀವನಕ್ಕೊಂದು ಭದ್ರ ಬುನಾದಿಯನ್ನು ನಿರ್ಮಿಸಲು ಸಾಧ್ಯವಾಗುತ್ತದೆ. ■


**URGENTLY REQUIRED FOR KUWAIT** Under KOC Project

- **CAPTAIN / CHIEF OFFICER / DIVER / SUPERVISORS** (Certified)
- **ABLE SEAMAN / ORDINARY SEAMAN** (CDC & Certify Required)
- **OPERATORS - CRAWLER CRANE / DREDGER / MOBILE CRANE / EXCAVATOR / LOADER / GANTRY CRANE** (Licence Required)
- **HEAVY DRIVER** (Kuwait Licence)
- **MECHANIC / OILER** (Required Experience)
- **FOREMAN (CIVIL)** - Diploma Required Experience
- **AUTO ELECTRICIAN/ ELECTRICIAN/ PLUMBER/ MECHANICAL** (DIESEL)/ **MASON** (BRICK)/ **RIGGERS / FLAGMAN / FORM WORKER** (SHUTTERING CARPENTER)/ **WELDER** (Required Experience)

**CLIENT INTERVIEW ON 10TH, 11TH & 12TH NOV., 2013 AT MUMBAI**

**URGENTLY REQUIRED FOR QATAR**

Maintenance & Emergency Section Reservoirs & Pumping Stations (MES/RPS)

- **Electrical Technician**
- **Mechanical Technician**
- **Instrument Technician**

Water Balance and Leak Detection (WLDS)

- **Water Balance and Leak Inspector**

5 years experience with Diploma in respective speciality and must have Copies of Educational Certificate, Experience Certificate, Passport and driving license.

Interested candidates rush their CV's with photo to **cv@comforttravelgroup.com**